ಇ) 18,909 ಮೆ.ಟನ್ ರಾಗಿಯನ್ನು ದಕ್ಷಿಣ ಕರ್ನಾಟಕದ 13 ಜಿಲ್ಲೆಗಳ ಕಾರ್ಡುದಾರರಿಗೆ ನ್ಯಾಯಬೆಲೆ ಅಂಗಡಿಗಳ ಮುಖಾಂತರ ವಿತರಿಸಲಾಗುತ್ತಿದೆ. ಜೋಳದ ವಿತರಣೆಯ ಬಗ್ಗೆ ಪರಿಶೀಲಿಸಲಾಗುತ್ತಿದೆ.

5615(6248) : ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನಲ್ಲಿ ವಿತರಿಸಿದ ಒಟ್ಟು ಅಂತ್ಯೋದಯ ಕಾರ್ಡುಗಳೆಷ್ಟು;

ಆ) 1–1–2005 ರಿಂದ ವಿತರಿಸಿದ ಅಂತ್ಯೋದಯ ಕಾರ್ಡುಗಳೆಷ್ಟು; ಯಾವ ನಿಯಮಾವಳಿ ಪ್ರಕಾರ ವಿತರಿಸಲಾಗಿದೆ ಹಾಗೂ ವಿತರಿಸಿದವರು ಯಾರು, ಯಾವಾಗ ವಿತರಿಸಿದರು (ವಿವರ ನೀಡುವುದು)

ಇ) ಸದರಿ ಕಾರ್ಡನ್ನು ಗ್ರಾಮಸಭೆ ಅಥವಾ ವಾರ್ಡ್ ಸಭೆಯಲ್ಲದೆ, ಅನ್ಯರಿಗೆ ಕಾರ್ಡ್‌ಗೆ ರೂ.100 ರಿಂದ ರೂ. 200 ರಂತೆ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹೊಸ ಕಾರ್ಡುದಾರರು ಆಹಾರಧಾನ್ಯ ಪಡೆದಿದ್ದಾರೆಯೇ; ಪಡೆಯದಿದ್ದಲ್ಲಿ ಆಹಾರಧಾನ್ಯ ಉಳಿದಿದೆಯೇ (ವಿವರ ನೀಡುವುದು)?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಜಮಖಂಡಿ ತಾಲ್ಲೂಕಿನಲ್ಲಿ ವಿತರಿಸಿರುವ ಅಂತ್ಯೋದಯ ಪಡಿತರ ಚೀಟಿಗಳ ವಿವರಗಳು ಈ ಕೆಳಕಂಡಂತಿದೆ.

ಹಂತ	ಪಟ್ಟಣ	ಗ್ರಾಮೀಣ	ಒಟ್ಟು
1ನೇ	935	2720	3655
2ನೇ	902	1280	2182
3ನೇ	1018	1610	2628
ಒಟ್ಟು	2885	5610	8465

ಆ) ದಿನಾಂಕ: 1.1.2005 ರಿಂದ ಎಎವೈ ಪಡಿತರ ಚೀಟಿ ವಿತರಿಸಿರುವುದಿಲ್ಲ.

ಇ) ಇಲ್ಲ.

ಈ) ಮೂರನೆ ಹಂತದಲ್ಲಿ ವಿತರಿಸಿದ ಕಾರ್ಡುದಾರರ ಪೈಕಿ ತುಂಗಳ ಗ್ರಾಮದ 4 ಪಡಿತರ ಚೀಟಿದಾರರು ಜೂನ್ 2005ರವರೆಗೆ ಆಹಾರಧಾನ್ಯ ಪಡೆದಿರುವುದಿಲ್ಲ. ತುಂಗಳ ಗ್ರಾಮದ ನ್ಯಾಯಬೆಲೆ ಅಂಗಡಿಯಲ್ಲಿ 4.48 ಕೆಜಿ ಅಕ್ಕಿ, 1.12 ಗೋಧಿ ದಾಸ್ತಾನಿರುತ್ತದೆ.

5616(6330) : ಶ್ರೀ ಶ್ರೀನಿವಾಸ್ ಎಂ. (ಮಂಡ್ಯ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆಯಿಂದ ಗ್ರಾಮಾಂತರ ಪ್ರದೇಶದಲ್ಲಿ ರಸ್ತೆ ಕಾಮಗಾರಿಗಳನ್ನು ಪ್ರಾರಂಭಿಸಲು ಎಲ್ಲಾ ಕ್ಷೇತ್ರಗಳಿಂದಲೂ ಅರ್ಜಿಗಳನ್ನು ಸ್ವೀಕರಿಸಿದ್ದುದು ನಿಜವೇ?

ಆ) ನಿಜವಿದ್ದಲ್ಲಿ, ಕ್ರಮ ತೆಗೆದುಕೊಳ್ಳದಿರಲು ಕಾರಣವೇನು?

ಇ) ಕ್ರಮ ತೆಗೆದುಕೊಂಡಿದ್ದಲ್ಲಿ ಯಾವ ಹಂತದಲ್ಲಿದೆ?

ಈ) ಮಂಡ್ಯ ನಗರದ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಕೆಲಸ ಮಾಡುತ್ತಿರುವ ಹಮಾಲಿಗಳಿಗೆ ವಸತಿ ಸೌಕರ್ಯ ನೀಡಲು ಸರ್ಕಾರ ಯೋಚಿಸಿದೆಯೇ;

ಉ) ಇದ್ದಲ್ಲಿ, ಕೈಗೊಂಡಿರುವ ಕ್ರಮಗಳೇನು?

ಶ್ರೀ ಪ್ರಕಾಶ್ ಬಾ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು):

ಅ) ಹೌದು.

ಆ) ನಬಾರ್ಡ್ ನೆರವನ್ನು ನಿರೀಕ್ಷಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಹೌದು.

ಉ) ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇವರ ಮೂಲಕ ವಿಶೇಷ ಉದ್ಯೋಗ ಗುಂಪಿನ ಯೋಜನೆಯಡಿ ಅನುಮೋದನೆ ನೀಡಲಾಗಿದೆ. ಮನೆಗಳನ್ನು ನಿರ್ಮಿಸುವ ಸಂಬಂಧ ಫಲಾನುಭವಿಗಳಿಗೆ ಹಕ್ಕು ಪತ್ರ ನೀಡುವ ಬಗ್ಗೆ ಮಂಡ್ಯ ಜಿಲ್ಲಾಧಿಕಾರಿಗಳು, ತಹಶೀಲ್ದಾರ್, ಮಂಡ್ಯ ತಾಲ್ಲೂಕು ಇವರಿಗೆ ಸೂಚನೆ ನೀಡಿದ್ದು, ಕ್ರಮ ಜರುಗಿಸಲಾಗುತ್ತಿದೆ.

5617(6539) : ಶ್ರೀ ಶ್ರೀನಿವಾಸ್ ಎಂ. (ಮಂಡ್ಯ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಕಸಬಾ ಹೋಬಳಿಗೆ ಸೇರಿದ ಬಿ. ಗೌಡಗೆರೆ ಗ್ರಾಮದಲ್ಲಿ ತೋಟಗಾರಿಕೆ ಇಲಾಖೆಗೆ ಸೇರಿದ ಯಾವುದಾದರೂ ಸರ್ಕಾರಿ ಜಮೀನು ಇದೆಯೇ;

ಆ) ಇದ್ದಲ್ಲಿ ಅದರ ವಿಸ್ತೀರ್ಣವೆಷ್ಟು; ಸದರಿ ಪ್ರದೇಶವನ್ನು ತೋಟಗಾರಿಕೆ ಇಲಾಖೆಗೆ ಯಾವಾಗ ನೀಡಲಾಗಿದೆ;

ಇ) ಸದರಿ ಪ್ರದೇಶದಲ್ಲಿ ತೋಟಗಾರಿಕೆ ಸಸ್ಯ ಕ್ಷೇತ್ರದ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆಯೇ; ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಕೆ. ಶ್ರೀನಿವಾಸಗೌಡ (ತೋಟಗಾರಿಕೆ ಸಚಿವರು):

ಅ) ಇದೆ.

ಆ) ಒಟ್ಟು ವಿಸ್ತೀರ್ಣ 4.05 ಎಕರೆ. ಇದನ್ನು 1999–2000ನೇ ಸಾಲಿನಲ್ಲಿ ಕಂದಾಯ ಇಲಾಖೆಯಿಂದ ತೋಟಗಾರಿಕೆ ಇಲಾಖೆಗೆ ವರ್ಗಾಯಿಸಲಾಗಿದೆ.

ಇ) ಇಲ್ಲ. ಮಳೆಗಾಲದಲ್ಲಿ ಪೂರ್ಣ ಪ್ರದೇಶ ನೀರಿನಿಂದ ಆವೃತವಾಗುವುದರಿಂದ ತೋಟಗಾರಿಕೆಗೆ ಸೂಕ್ತವಾಗಿರುವುದಿಲ್ಲ.

5618(6529) : ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಸ್ತುತ ವರ್ಷ ರೈತರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ಸರಬರಾಜು ಮಾಡಲು ಸರ್ಕಾರ ಉದ್ದೇಶಿಸಿದೆಯೇ;